ಕೆ.ಆರ್.ನಗರಕ್ಕೆ ₹200 ಕೋಟಿ ಅನುದಾನ

ಮತದಾರರಿಗೆ ಕೃತಜ್ಞತಾ ಸಮರ್ಪಣಾ ಸಮಾರೋಪ | ಸಣ್ಣ ನೀರಾವರಿ ಇಲಾಖೆಯಿಂದ 50 ಕೋಟಿ ಮಂಜೂರು

ಕೆ.ಆರ್.ನಗರ: ರಾಜ್ಯ ಕಾಂಗ್ರೆಸ್ ಸರ್ಕಾರ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರಕ್ಕೆ ಇದುವರೆಗೆ 200 ಕೋಟಿ ರೂ.ಅನುದಾನ ಬಿಡುಗಡೆ ಮಾಡಿದೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ದೇವಿತಂದ್ರೆ ಗ್ರಾಮದಲ್ಲಿ ಮತದಾರರಿಗೆ ಏರ್ಪಡಿಸಿದ್ದ ಕೃತಜ್ಞತಾ ಸಮರ್ಪಣಾ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು ಸಿಎಂ ವಿಶೇಷ ಅನುದಾನ ಲೋಕೋಪಯೋಗಿ ಸೇರಿದಂತೆ ನಾನಾ ಇಲಾಖೆಗಳಡಿ ಒಟ್ಟು 200 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು ಈಗಾಗಲೇ ಕೆಲವೆಡೆ ಕಾಮಗಾರಿಯೂ ಶುರುವಾಗಿದೆ ಎಂದರು.

ಕೆಸ್ತೂರು ಕೊಪ್ಪಲು ಭಾಗಕ್ಕೆ ಸಣ್ಣ ನೀರಾವರಿ ಇಲಾಖೆಯಿಂದ ಸುಮಾರು 50 ಕೋಟಿ ಮಂಜೂರಾಗಿದ್ದು ಮುಖ್ಯಮಂತ್ರಿಗಳು ಬಜೆಟ್‌ನಲ್ಲೆ ಪ್ರಕಟಿಸಿದ್ದಾರೆ. ಸಾಲಿಗ್ರಾಮದಲ್ಲಿ ತಾಲೂಕು ಆಸ್ಪತ್ರೆ ನಿರ್ಮಾಣ ಸೇರಿದಂತೆ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ನಿಟ್ಟಿನಲ್ಲಿ ಅನುದಾನ ತರಲು ನಿರಂತರ ಶ್ರಮಿಸಲಾಗುವುದು ಎಂದು ಹೇಳಿದರು.

20 ವರ್ಷದ ಬಳಿಕ ಅಧಿಕಾರ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಕಂಡು 20 ವರ್ಷವಾಗಿತ್ತು ನಮ್ಮ ಪಕ್ಷದ ಕಾರ್ಯಕರ್ತರು

ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ ಬೇರೆ ಪಕ್ಷದ ಬಾಗಿಲು ತಟ್ಟದೆ ಛಲ ಸ್ವಾಭಿಮಾನದಿಂದ ಕಾಂಗ್ರೆಸ್‌ಗೆ ಅಭೂತಪೂರ್ವ ವಿಜಯ ತಂದುಕೊಟ್ಟಿದ್ದಾರೆ. ಗೆಲುವು ನನ್ನದಲ್ಲ ನಿಷ್ಠಾವಂತ ಪ್ರತಿಯೊಬ್ಬ ಕಾರ್ಯಕರ್ತನಿಗೂ ಕಾಂಗ್ರೆಸ್‌ನ ಜಯ ಸಲ್ಲಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿ ನುಡಿದಂತೆ ನಡೆದ ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳೆ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರೀರಕ್ಷೆಯಾಗಲಿದೆ. ರಾಜ್ಯದಲ್ಲಿ ಭೀಕರ ಬರವಿದ್ದರೂ ಕೇಂದ್ರ ಸರಕಾರ ಸ್ಪಂದಿಸಲಿಲ್ಲ.ನಮ್ಮ ಪಾಲಿನ ನ್ಯಾಯಯುತ ತೆರಿಗೆ ಪಾಲನ್ನು ನೀಡುತ್ತಿಲ್ಲ. ಮುಂಬರುವ ಚುನಾವಣೆಯಲ್ಲಿ ಜನವಿರೋಧಿ ಕೇಂದ್ರದ ಎನ್‌ಡಿಎ ಸರಕಾರವನ್ನು ಕಿತ್ತೊಗೆಯಿರಿ ಎಂದರು.

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೀಗೌಡ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ ಕುಮಾರ್ ಮಾತನಾಡಿದರು.

ಈ ಸಂದರ್ಭದಲ್ಲಿ ತಾ.ಪಂ ಮಾಜಿ ಅಧ್ಯಕ್ಷರಾದ ವೀಣಾದಲೀಪ್, ಹೆಚ್.ಟಿ.ಮಂಜಪ್ಪ, ಹಾಡ್ಯ ಮಹದೇವಸ್ವಾಮಿ,ತಾಲೂಕುಶರಣಸಾಹಿತ್ಯ ಪರಿ?ತ್ ಅಧ್ಯಕ್ಷ ಸಿ.ಪಿ.ರಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಶಂಕರ್, ಎಂ.ಎಸ್.ಮಹದೇವ್, ವಕ್ತಾರ ಸಯ್ಯದ್ ಜಾಬೀರ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ್, ಎಸ್.ಕೆ.ಪ್ರಭಾಕರ್, ಮಹಿಳಾ ಘಟಕದ ಅಧ್ಯಕ್ಷೆ ರಾಣಿ, ಎಸ್.ಎಸ್.ಸಂದೇಶ್, ಜಯಂತ್, ಪುರಸಭಾ ಸದಸ್ಯ ಕೋಳಿಪ್ರಕಾಶ್, ಜಿ.ಪಂ ಮಾಜಿ ಸದಸ್ಯ ರಾದ ರಾಜಯ್ಯ, ಶಿವರಾಂ,

> **ಮಂಡ್ಯ ಲೋಕಸಭಾ ಕ್ಷೇತ್ರದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಮತ್ತು ನನಗೆ ಮತದಾರರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾಗುತ್ತಿದ್ದು ಎಲ್ಲಾ ಶಾಸಕರು ಮುಖಂಡರ ಕಾರ್ಯಕರ್ತರ ಒಮ್ಮತದ ಅಭ್ಯರ್ಥಿಯಾಗಿ ನನ್ನನ ಘೋಷಿಸಿದ್ದಾರೆ ನಿಮ್ಮೆಲ್ಲರ ಆಶೀರ್ವಾದಿಂದ ಗೆದ್ದು ಪ್ರಮಾಣ ವಚನ ಸ್ವೀಕರಿಸಿದ ನಂತರ ಮೊದಲ ಕೃತ್ಞನಾತ ಸಭೆ ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಮಾಡುವ ಮೂಲಕ ನಿಮ್ಮ ಸೇವೆ ಮಾಡುತ್ತೇನೆ ಈ ಒಂದು ಅವಕಾಶ ನೀಡಿ.**
>
> ■ ವೆಂಕಟೇರಮಣೇಗೌಡ, ಮಂಡ್ಯ ಕ್ಷೇತ್ರದ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ

ಕಾಂಗ್ರೆಸ್ ಎಸ್‌ಟಿ ಘಟಕದ ರಾಜ್ಯ ಉಪಾಧ್ಯಕ್ಷ ಕಲ್ಲಹಳ್ಳಿಶ್ರೀನಿವಾಸ್, ಎಸ್‌ಟಿ ಘಟಕದ ತಾ.ಅಧ್ಯಕ್ಷ ತಿಪ್ಪೂರುಮಹದೇವನಾಯಕ, ಎಸ್‌ಸಿ ಘಟಕದ ತಾ.ಅಧ್ಯಕ್ಷ ಕಂಠಿಕುಮಾರ್, ಸೇರಿದಂತೆ ನೂರಾರು ಮುಖಂಡರು. ಕಾರ್ಯಕರ್ತರು ಇದ್ದರು.

ಕಿರು ಸುದ್ದಿ

ಕಾಲು ಗೊರಸೆ ಕಾಯಿಲೆಗಳ ನಿರ್ವಹಣೆ ಕಾರ್ಯಾಗಾರ

ಕೋಲಾರ: ನಗರದ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ, ಟಮಕ, ಕೋಲಾರದಲ್ಲಿ ಎಸ್‌ಸಿಎಸ್‌ಪಿ ಯೋಜನೆಯಲ್ಲಿ ಹಸುಗಳಲ್ಲಿ ರೋಗಗಳ ನಿರ್ವಹಣೆ ಕುರಿತು ತರಬೇತಿ ಕಾರ್ಯಕ್ರಮ ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ರೈತ ಫಲಾನುಭವಿಗಳಿಗೆ ಹಸು ಹಾಸಿಗೆಗಳ ವಿತರಣಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಶಿವಾನಂದ ವಿ. ಹೊಂಗಲ ಮಾತನಾಡಿ, ಜಿಲ್ಲೆಯು ಅತಿ ಹೆಚ್ಚಿನ ಹಾಲು ಉತ್ಪಾದನೆಗೆ ಹೆಸರುವಾಸಿಯಾಗಿದ್ದು, ಹೆಚ್ಚಿನ ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಯಶಸ್ವಿಯಾಗಿದ್ದಾರೆ, ಆದಗ್ಯೂ ರೈತರು ಹೈನುಗಾರಿಕೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದರು.

ಸರ್ಕಾರದ ಗ್ಯಾರಂಟಿಯಿಂದ ಜನತೆಗೆ ವಿಶ್ವಾಸ

ಮಾಲೂರು: ರಾಜ್ಯದ ಮಹಿಳೆಯರ ಆಶೀರ್ವಾದದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ನುಡಿದಂತೆ ನಡೆದು ಐದು ಗ್ಯಾರಂಟಿಗಳು ಜಾರಿಗೊಳಿಸಿದೆ ಎಲ್ಲಾ ಗ್ಯಾರೆಂಟಿಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಮುಂದುವರೆಸಲು ಸರ್ಕಾರಕ್ಕೆ ಶಕ್ತಿ ತುಂಬುವಂತೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮಿಹೆಬ್ಬಾಳ್ಕರ್ ಹೇಳಿದರು. ತಾಲೂಕಿನ ಕೆಜಿ. ಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಸರ್ಕಾರ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸರ್ಕಾರ ಅಕಾರಕ್ಕೆ ಬಂದಾಗೆಲ್ಲ ಬಡವರು, ಮಹಿಳೆಯರು, ರೈತರು, ಕಾರ್ಮಿಕರ ಪರವಾಗಿ ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುತ್ತದೆ. ಆದರೆ ಬಿಜೆಪಿ ಸರ್ಕಾರಗಳು ಸುಳ್ಳು ಭರವಸೆಗಳನ್ನು ನೀಡಿ ಆಡಳಿತಕ್ಕೆ ಬಂದ ಮೇಲೆ ಯಾವುದೇ ರೀತಿಯ ಯೋಜನೆಗಳನ್ನು ಜಾರಿಗೊಳಿಸುವುದಿಲ್ಲ.ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ರಾಜ್ಯದಲ್ಲಿ ಆಡಳಿತಕ್ಕೆ ಬಂದರೆ 5 ಗ್ಯಾರಂಟಿ ಯೋಜನೆಗಳು ಸರ್ಕಾರದಲ್ಲಿ ಈಡೇರಿಸುವ ಬಗ್ಗೆ ಭರವಸೆ ನೀಡಿತ್ತು ಅದರಂತೆ ಕಾಂಗ್ರೆಸ್ ಪಕ್ಷ ಸರ್ಕಾರ ಅಕಾರಕ್ಕೆ ಬಂದು 6 ತಿಂಗಳಲ್ಲಿ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜೊತಿ, ಶಕ್ತಿ, ಯುವ ನಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಜನರ ಕಷ್ಟ ಸುಖಗಳಿಗೆ ಸ್ಪಂದಿಸಿದೆಂದರು. ಶ್ರೀಮಂತರನ್ನು ಶ್ರೀಮಂತರನಾಗಿಸುವುದೇ ಬಿಜೆಪಿ ಸರ್ಕಾರದ ಆಡಳಿತವಾಗಿದೆ. ಲೋಕಸಭಾ ಚುನಾವಣೆ ನಂತರ ಗ್ಯಾರಂಟಿಗಳು ನಿಂತು ಹೋಗುತ್ತದೆ ಎಂದು ಬಿಜೆಪಿಯವರು ಟೀಕಿಸುತ್ತಾರೆ. ಯಾವುದೇ ಕಾರಣಕ್ಕೂ ಲೋಕಸಭೆ ಚುನಾವಣೆ ನಂತರ ಗ್ಯಾರೆಂಟಿ ಯೋಜನೆಗಳನ್ನು ಸರ್ಕಾರ ನಿಲ್ಲಿಸುವುದಿಲ್ಲ ದಿನಸಿ ಸಾಮಗ್ರಿಗಳು ಗಗನಕ್ಕೆ ಏರಿದ್ದರಿಂದ ಜನಸಾಮಾನ್ಯರ ಕಷ್ಟಗಳಿಗೆ ಅನುಕೂಲ ವಾಗುವಂತಹ ಕಾರ್ಯಕ್ರಮಗಳು ಎಲ್ಲಾ ವರ್ಗದ ಜನತೆಗೆ ತಲುಪಿದೆ ಸುಳ್ಳು ಭರವಸೆ ನೀಡುವ ಸರ್ಕಾರ ನಮ್ಮದಲ್ಲ ಬಿಜೆಪಿಯವರು 400 ಸೀಟು ಲೋಕಸಭೆಯಲ್ಲಿ ನಮಗೆ ಬಂದರೆ ನರೇಂದ್ರ ಮೋದಿಯವರು ಸಂವಿಧಾನವನ್ನು ತಿದ್ದುಪಡಿ ಮಾಡಲು ಸಾಧ್ಯವಾಗುತ್ತದೆ ಎಂದರು. ಶಾಸಕ ಕೆ.ವೈ.ನಂಜೇಗೌಡ ಮಾತನಾಡಿ, ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಗಳು ಅಕಾರಕ್ಕೆ ಬಂದ ಮೇಲೆ 6 ತಿಂಗಳಲ್ಲಿ ವಿಶೇಷವಾದ ಕಾರ್ಯಕ್ರಮಗಳಾದ ಅನ್ನಭಾಗ್ಯ, ಗೃಹಜೋತಿ, ಗೃಹಲಕ್ಷ್ಮಿ, ಶಕ್ತಿ, ಅನುಷ್ಠಾನಗೊಳಿಸಿ ಕೊಟ್ಟು ಮಾತಿನಂತೆ ನಡೆದುಕೊಂಡಿದೆ 5 ಭರವಸೆಗಳ ಕಾರ್ಯಕ್ರಮಗಳ ಅನುಷ್ಠಾನದ ಸಮಾವೇಶಗಳು ತಾಲೂಕಿನಲ್ಲಿ ಈಗಾಗಲೇ ಲಕ್ಕೂರು,ಮಾಸ್ತಿ ಹೋಬಳಿಯಲ್ಲಿ ಯಶಸ್ವಿಯಾಗಿ ನಡೆದಿದ್ದು, ಟೇಕಲ್ ಹೋಬಳಿಯಲ್ಲೂ ಸಹ ಯಶಸ್ವಿಯಾಗಿದೆ.

ಬಂಜಾರ ಸಮಾಜಕ್ಕೆ ಅನ್ಯಾಯ

ಬೆಂಗಳೂರು: ಲೋಕಸಭೆ ಚುನಾವಣೆ ಕಾಂಗ್ರೆಸ್ ಪಕ್ಷದ ಟಿಕೆಟ್ ನೀಡದಿರುವುದು ಬಂಜಾರ ಸಮಾಜಕ್ಕೆ ಅನ್ಯಾಯ ಎಂದು ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್ ಹೇಳಿದರು. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯದಡಿ ರಾಜ್ಯದ 5 ಮೀಸಲು ಲೋಕಸಭೆ ಕ್ಷೇತ್ರಗಳಲ್ಲಿ ಹೆಚ್ಚಿನ ಲಂಬಾಣಿ ಜನಸಂಖ್ಯೆ ಹಾಗೂ 2.5 ಲಕ್ಷಕ್ಕೂ ಹೆಚ್ಚು ಮತಗಳಿರುವ ವಿಜಯಪುರ ಮೀಸಲು ಕ್ಷೇತ್ರಕ್ಕೆ ಕಳೆದ 3 ದಶಕಗಳಿಂದ ಬಂಜಾರ ಅಭ್ಯರ್ಥಿಗಳಿಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿತ್ತು. ಆದರೆ ಈ ಬಾರಿ ನಮ್ಮ ಸಮಾಜಕ್ಕೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡದೆ ಆಘಾತ ಉಂಟು ಮಾಡಿದೆ ಎಂದರು. ಬಿಜೆಪಿ ಸರ್ಕಾರ ನ್ಯಾಯಮೂರ್ತಿ ಸದಾಶಿವ ಆಯೋಗದ ಒಳಮೀಸಲಾತಿಯನ್ನು ಘೋಷಣೆ ಮಾಡಿ ಸರ್ಕಾರವನ್ನೇ ಕಳೆದುಕೊಂಡ ವಿಚಾರ ರಾಜ್ಯದ ಜನತೆಗೆ ಗೊತ್ತಿದೆ. ಇದನ್ನು ಅರಿತು ಕಾಂಗ್ರೆಸ್ ರಾಜ್ಯ ನಾಯಕರು ಹಾಗೂ ಕಾಂಗ್ರೆಸ್ ಹೈಕಮಾಂಡ್ ನಮ್ಮ ಸಮಾಜ ಕ್ಕೆ ಟಿಕೆಟ್ ನೀಡುವುದರ ಕುರಿತು ಮರುಪರಿಶೀಲನೆ ಮಾಡಿ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.ಸಮಾಜದ ಮುಖಂಡರಾದ ಸಿದ್ಯಾನಾಯಕ್, ಅಶ್ವತ್ ನಾಯಕ್, ಪಿ.ಕೆ. ಖಂಡೋಬ, ಸುಬ್ರಮಣ್ಯ ನಾಯಕ್ ಇದ್ದರು.

ಧಮ್ಮ ವಿಹಾರ ಟ್ರಸ್ಟ್‌ಗೆ ದಶಕದ ಸಂಭ್ರಮ

ಬಂಗಾರಪೇಟೆ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರ ಆಶಯದಂತೆ ಮುನ್ನಡೆಯುತ್ತಿರುವ ಧಮ್ಮ ವಿಹಾರ ಟ್ರಸ್ಟ್‌ನ ಅಧ್ಯಕ್ಷರಾದ ದೇವಕುಮಾರ್ ರವರು ಬೀಜ ಹಾಕಿದ್ದಾರೆ. ನಾವೆಲ್ಲರೂ ನೀರಾಕಿ ಬೆಳೆಸೋಣ, ಅವರ ಆಶಯ ಈಡೇರಲು ನೂರಾರು ಕೈಗಳ ಸಹಾಯ ಹಸ್ತ ಬೇಕಿದೆ ಎಂದು ಕನ್ನಡ ಸಂಘದ ಅಧ್ಯಕ್ಷ ಡಾ.ಪಲ್ಲವಿಮಣಿ ಹೇಳಿದರು.

ತಾಲ್ಲೂಕಿನ ಬಾವರಹಳ್ಳಿ ಗ್ರಾಮ ಸಮೀಪವಿರುವ ಧಮ್ಮ ವಿಹಾರ ಟ್ರಸ್ಟ್ ಆವರಣದಲ್ಲಿ ನಡೆದ ದಶಮಾನೋತ್ಸವ ಮತ್ತು ಜಿಲ್ಲಾ ಮಟ್ಟದ ಕವಿಗೋಷ್ಠಿ ಹಾಗೂ ಗೌರವ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ದೇವಕುಮಾರ್ ರವರ ತುಡಿತ-ಮಿಡಿತ ಟ್ರಸ್ಟನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕು ಎಂಬುದರ ಕುರಿತು ಚಿಂತಿಸುತ್ತಾರೆ ವಿನಃ, ಅವರ ಸ್ವಂತಕ್ಕಾಗಿ ಏನನ್ನೂ ಅಪೇಕ್ಷಿಸಿದವರಲ್ಲ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರ ಆಶಯದಂತೆ ನಡೆಯುತ್ತಿರುವ ಇಂತಹ ನಿಸ್ವಾರ್ಥ ಸೇವಾ ಮನೋಭಾವ ಉಳ್ಳವರನ್ನು ನಾವೆಲ್ಲಾ ಕೈಕೈ ಜೋಡಿಸಿ ಎತ್ತಿ ಬೆಳೆಸೋಣ. ಆಗ ಈ ಟ್ರಸ್ಟ್ ಹೆಮ್ಮರವಾಗಿ ಬೆಳೆಯಲಿದೆ ಎಂದರು

ಸಿಎಂಬಿ ವಂಶೋಧಯ ಆಸ್ಪತ್ರೆ ಹಿರಿಯ ನಿರ್ದೇಶಕರಾದ ಡಾ.ಎಂ.ಗೋವಿಂದರಾಜು ಮಾತನಾಡಿ , ಕೋಲಾರ ಗಾಂಧಿನಗರದಲ್ಲಿ ಚಿಕ್ಕಂದಿನಿಂದಲೂ ನಾನು, ದೇವಕುಮಾರ್ ಒಟ್ಟಿಗೆ ಬೆಳೆದವರು. ಬಡತನದ ಬೇಗೆಯಲ್ಲಿ ಬೆಂದು, ಸದ್ಗುಣ ಬೆಳೆಸಿಕೊಂಡು ಸ್ವಂತ ಪ್ರತಿಭೆಯಿಂದ ಹಂತ ಹಂತವಾಗಿ ಎತ್ತರಕ್ಕೇರಿದ ದೇವಕುಮಾರ್ ವೃತ್ತಿಯಲ್ಲಿ ಶಿಕ್ಷಕರಾಗಿ, ಮುಖ್ಯೋಪಾಧಾಯರಾಗಿ ಸೇವೆಯಿಂದ ನಿವೃತ್ತರಾದ ಇವರು, ಕುಟುಂಬಸ್ಥರೊಂದಿಗೆ ನಿವೃತ್ತಿ ಜೀವನ ಕಳೆಯಬಹುದಿತ್ತು. ಆದರೆ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂಬ ದೃಢ ನಿರ್ಧಾರದಿಂದ 10 ವರ್ಷಗಳ ಹಿಂದ ಅಸ್ತಿತ್ವಕ್ಕೆ ಬಂದ ಈ ಧಮ್ಮ ವಿಹಾರ ಟ್ರಸ್ಟ್ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿಯಾಗಿದೆ. ಸಾಕಷ್ಟು ಮಂದಿ ಸಹಕಾರದಿಂದ ಟ್ರಸ್ಟ್ ಉನ್ನತಿಯಾಗಿದೆ. ಅವರ ಸಹಾಯ ಹಸ್ತ ಮುಂದೆಯೂ ಮುಂದುವರೆಯಲಿ ಎಂದು ಟ್ರಸ್ಟ್‌ನ ನಿರ್ದೇಶಕರು ಹಾಗೂ ರವರು ಆಶಿಸಿದರು.

ಬಂಗಾರಪೇಟೆ ತಾಲೂಕು ರೋಟರಿ ಕ್ಲಬ್ ಅಧ್ಯಕ್ಷ ಅಶ್ವತ್ಥ್ ಮಾತನಾಡಿ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಅಧ್ಯಕ್ಷರು ಹಾಗೂ ಕರವೇ ಹೊಸಕೋಟೆ ತಾಲೂಕು ಉಪಾಧ್ಯಕ್ಷೆ ವಿ.ಉಷಾ, ಜಿಲ್ಲಾ ದಲಿತ ಶೋಷಿತ ರಕ್ಷಣಾ ವೇದಿಕೆ ಅಧ್ಯಕ್ಷ ಅಕ್ವಾ ವೆಂಕಟೇಶ್ ಅವರುಗಳು, ನಿವೃತ್ತ ಮುಖ್ಯೋಪಾಧ್ಯಯರಾದ ದೇವಕುಮಾರ್ ರವರು ಪ್ರಾರಂಭಿಸಿದ 'ಧಮ್ಮ ವಿಹಾರ ಟ್ರಸ್ಟ್' ಹಲವು ಸಮಸ್ಯೆ-ಸವಾಲುಗಳನ್ನು ಎದುರಿಸಿ ದಶಕ ಪೂರೈಸಿದೆ. ನಿಸ್ವಾರ್ಥ ಗುಣವುಳ್ಳ ದೇವಕುಮಾರ್‌ರ ಈ ಸೇವೆಗೆ ಸರ್ವರ ಸಹಾಯ-ಸಹಕಾರ ಅತ್ಯಗತ್ಯವಿದೆ. ನಾವೆಲ್ಲಾ ಈ ಟ್ರಸ್ಟ್ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

ಧಮ್ಮ ವಿಹಾರ ಟ್ರಸ್ಟ್‌ನ ಅಧ್ಯಕ್ಷರಾದ ದೇವಕುಮಾರ್ ಮಾತನಾಡಿ ಸಮಾಜಸೇವೆ ಹೆಸರಿನಲ್ಲಿ ಕೆಲವರು ದುರುಪಯೋಗವಾಗ ಮಾಡುತ್ತಿದ್ದು, ಪಾರದರ್ಶಕವಾಗಿ, ಸಮಾಜಮುಖಿಯಾಗಿ ಸೇವೆ ಮಾಡುತ್ತಿರುವ ನಮ್ಮಂತವರಿಗೂ ಆಕರಿನೆರಳು ಬೀಳುವುದರಿಂದ ನಮ್ಮ ಕಾರ್ಯಚಟುವಟಿಕೆಗಳಿಗೆ ಹೊಡೆತ ಬೀಳುವಂತಹ ದುಸ್ಥಿತಿ ಎದುರಾಗಿದೆ ಎಂದು ತಮ್ಮ ಮನಸ್ಸಿನ ಅಳಲನ್ನು ತೋಡಿಕೊಂಡರು.

ಈವೇಳೇ ಟ್ರಸ್ಟಿನ ನಿರ್ದೇಶಕರಾದ ಬಿ.ಪಿ.ಸೋಮಸುಂದರ್, ಅತ್ತಿಗಿರಿ ಎಂ.ನಾರಾಯಣಪ್ಪ, ನಿವೃತ್ತ ನೌಕರರಾದ ಎಸ್. ಆರ್.ನಾರಾಯಣ್, ಎಂ.ನಾಗರಾಜ್, ವಿ.ಮುನಿವೆಂಕಟಪ್ಪ, ಹುಣಸನಹಳ್ಳಿ ಪಿ.ವೆಂಕಟೇಶಯ್ಯ, ಕುಪ್ಪನಹಳ್ಳಿ ಜಯಪ್ಪ, ಎಸ್.ಆರ್.ಸಂಜೀವಪ್ಪ, ಆರ್.ಅಶ್ವಥ್, ಬಾವರಹಳ್ಳಿ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಮುನಿಯಪ್ಪ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಕೇಸ್

ಕೋಲಾರ: ಅರಣ್ಯ ಭೂಮಿ ಒತ್ತುವರಿ ಕಾರ್ಯಾಚರಣೆ ಮುಂದುವರೆಸಿ ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲು ಆಗ್ರಹಿಸಿ ರೈತ ಸಂಘದಿಂದ ಅರಣ್ಯ ಇಲಾಖೆ ವ್ಯವಸ್ಥಾಪಕ ಶ್ರೀನಿವಾಸ್ ಅವರಿಗೆ ಮನವಿ ನೀಡಿ ಒತ್ತಾಯಿಸಲಾಯಿತು.

ದರಕಾಸ್ತು ಕಮಿಟಿ ಮೂಲಕ ಕಾನೂನು ಬದ್ದವಾಗಿ 1 ರಿಂದ 4 ಎಕರೆ ಜಮೀನು ಮಂಜೂರಾಗಿದ್ದರೆ, ಅಂತಹ ಪ್ರಾಮಾಣಿಕ ರೈತರು ದಾಖಲೆಗಳು ಇದ್ದರೆ, ದಾಖಲೆಗಳನ್ನು ಪರಿಶೀಲನೆ ಮಾಡಲು ವಿಶೇಷವಾದ ನ್ಯಾಯಾಲಯವನ್ನು ಅರಣ್ಯ ಸಚಿವರು ರಚನೆ ಮಾಡಿ ನೊಂದ ರೈತರಿಗೆ ನ್ಯಾಯ ಕೊಡಿಸಲಿ ಅಂತಹ ರೈತರಿಗೆ ನಾವು ಸಹ ಬೆಂಬಲವಾಗಿ ನಿಲ್ಲುತ್ತೇವೆಂದು ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ನೊಂದ ರೈತರಿಗೆ ಭರವಸೆ ನೀಡಿದರು. ಅಮಾಯಕ ರೈತರ ಹೆಸರಿನಲ್ಲಿ 5 ಎಕರೆಯಿಂದ ನೂರಾರು ಎಕರೆ ಅರಣ್ಯ ಭೂಮಿಗ